**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.202/2021

**PW**. 1

**CW**. 1

**ಸಾಕ್ಷಿಯ ಹೆಸರು -ಬೀರೇಶ**

**ತಂದೆಯ ಹೆಸರು -ಸುಬ್ರಮಣ್ಯ**

**ವಯಸ್ಸು -37 ವರ್ಷಗಳು** ದಿನಾಂಕ 09-10-2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ -ವ್ಯವಸಾಯ**

**ವಾಸಸ್ಥಳ -ಸಣ್ಣೇಗೌಡರ ಕಾಲೋನಿ, ಹುಣಸೂರು ತಾಃ**

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

ಚಾಸಾ-2 ನನ್ನ ಸಹೋದರ. ಚಾಸಾ-3 ನನ್ನ ಹೆಂಡತಿ. ಆರೋಪಿತರು ನಮ್ಮ ಊರಿನವರಾದ ಕಾರಣ ಗೊತ್ತು. ಈಗ್ಗೆ 3 ವರ್ಷಗಳ ಹಿಂದೆ ಒಂದು ದಿನ ನಮ್ಮುರಿನ ಮಾದೇಗೌಡರಿಗೆ ಸೇರಿದ ಜಮೀನಿನಲ್ಲಿ ಆರೋಪಿತರು ಹೊಗೆಸೊಪ್ಪಿನ ಸಸಿಗಳನ್ನು ನೆಡುವುದಕ್ಕೆ ಟ್ರೇ ಮಾಡಿ ಇಟ್ಟುಕೊಂಡಿದ್ದರು. ನಮ್ಮ ನಾಯಿ ಸದರಿ ಟ್ರೇ ಗಳನ್ನು ತುಳಿದ ಸಂಬಂಧವಾಗಿ 1 ನೇ ಆರೋಪಿ ಮತ್ತು ಚಾಸಾ-2 ರವರಿಗೆ ಗಲಾಟೆ ಆಗಿತ್ತು. ಅದಾದ 2-3 ದಿನಗಳ ನಂತರ ಬೆಳಗ್ಗೆ 5.00 ರಿಂದ 5.30 ಗಂಟೆ ಸಮಾರಿಗೆ ಚಾಸಾ-2 ಗದ್ದೆಗೆ ಹೋಗುವಾಗ ನಾನು ಮತ್ತು ಚಾಸಾ-3 ನಮ್ಮ ಮನೆಯ ಮುಂದೆ ನಿಂತಿದ್ದೆವು. ಆಗ ಆರೋಪಿತರು ನನ್ನ ತಮ್ಮನ ಜೊತೆ ಜಗಳ ಮಾಡಿ , 1 ನೇ ಆರೋಪಿ ಅವರ ಮನೆಯಿಂದ ಒಂದು ಮಚ್ಚನ್ನು ತೆಗೆದುಕೊಂಡು ಬಂದು , ಚಾಸಾ-2 ರವರಿಗೆ ತಲೆಗೆ ಹೊಡೆದ. ಉಳಿದ ಆರೋಪಿತರು ನನ್ನ ತಮ್ಮನನ್ನು ಹಿಡಿದುಕೊಂಡಿದ್ದರು. 1 ನೇ ಆರೋಪಿಯು ಅದೇ ಮಚ್ಚಿನಿಂದ ಚಾಸಾ-2 ರವರು ಹೊಟ್ಟೆಗೆ ಹೊಡೆದು ಕೊಲೆ ಮಾಡಲು

ಪ್ರಯತ್ನಪಟ್ಟ .ಆಗ ಚಾಸಾ-2 ರವರು ಕಳೆಗೆ ಬಿದ್ದರು. ನಾನು ಮತ್ತು ಚಾಸಾ-3 ಜಗಳ ಬಿಡಿಸಿ, ನನ್ನ ತಮ್ಮನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ನನ್ನ ತಾಯಿ ಮತ್ತು ಇತರರು ಕರೆದುಕೊಂಡು ಹೋದರು. ನನ್ನ ತಮ್ಮನ ತಲೆಗೆ ಮತ್ತು ಸೊಂಟದ ಎಡಭಾಗಕ್ಕೆ ಗಾಯವಾಗಿತ್ತು. ನಾನು ನಮ್ಮ ಊರಿನ ಸುನೀಲ್ ನಿಂದ ಒಂದು ದೂರನ್ನು ಬರೆಸಿಕೊಂಡು, ಫಿರ್ಯಾದಿಯನ್ನು ನೀಡಿದ್ದೇನೆ. ಅದನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ-1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಾನು ಹೇಳಿದಂತೆ ದೂರನ್ನು ಬರೆದಿರುತ್ತಾರೆ. ನಾನು ದೂರು ನೀಡಿದ ನಂತರ ಮಧ್ಯಾಹ್ನ 2.00 ಗಂಟೆಗೆ ಪೋಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದು , ಪಂಚನಾಮೆ ಮಾಡಿರುತ್ತಾರೆ. ನಾನೇ ಪೊಲೀಸರಿಗೆ ಸ್ಥಳ ತೋರಿಸಿರುತ್ತೇನೆ. ಪಂಚನಾಮೆ ಕಾಲಕ್ಕೆ ಪೊಲೀಸರು ನನ್ನ ತಮ್ಮನ ರಕ್ತಕಲೆಯಾದ ಟವೆಲ್, ರಕ್ತಸಿಕ್ತ ಮಣ್ಣು ಮತ್ತು ರಕ್ತರಹಿತ ಮಣ್ಣುನ್ನು ಜಪ್ತಿ ಮಾಡಿದರು. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಚಾಸಾ-8 ರವರು ಸಹ ಸಹಿ ಮಾಡಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ಪೊಲೀಸರು ಒಟ್ಟು 7 ಫೋಟೋಗಳನ್ನು ತೆಗೆದಿರುತ್ತಾರೆ. ಅವುಗಳನ್ನು ಈಗ ನೋಡುತ್ತಿದ್ದು, ನಿಪಿ-3 ರಿಂದ 9 ಎಂದು ಗುರುತಿಸಲಾಯಿತು. ಸದರಿ ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಸೀಲಾದ ಬಟ್ಟೆಯಿಂದ ಮಚ್ಚನ್ನು , ರಕ್ತಸಿಕ್ತ ಮಣ್ಣು ಮತ್ತು ರಕ್ತರಹಿತ ಮಣ್ಣುನ್ನು ಹಾಗೂ ಟವೆಲ್ ಅನ್ನು ತೆಗೆದು ನೋಡಲಾಗಿ , ಸದರಿ ಮಚ್ಚು ಮು.ಮಾ-1 ಹಾಗೂ ಟವೆಲ್ ಅನ್ನು ಮು.ಮಾ-2 , ರಕ್ತಸಿಕ್ತ ಮಣ್ಣು ಮು.ಮಾ-3 ಹಾಗೂ ರಕ್ತರಹಿತ ಮಣ್ಣನ್ನು ಮು.ಮಾ-4 ಎಂದು

ಗುರುತಿಸಲಾಯಿತು. ಈ ಮೊದಲು ಆರೋಪಿರಿಗೂ ಹಾಗೂ ನಮಗೂ ಯವ್ರೂದೇ ತಂಟೆ ಇರಲಿಲ್ಲ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಆರ್ ಎಸ್ ಎಂ ವಕೀಲರಿಂದಃ–**

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲನ್ನು ರೂ. 1000/– ವೆಚ್ಚದ ಮೇರೆಗೆ ಮುಂದೂಡಲಾಯಿತು.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.